**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 13-02-2024.**

**ಮುಂದುವರೆದ ಪಾಟೀ ಸವಾಲು - 5 ರಿಂದ 7 ನೇ ಪ್ರತಿವಾದಿ ಪರ ವಕೀಲರಿಂದ :**

**1)** ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಮ್ಮ ತಾತನ ಹೆಸರು ಮುನಿಶಾಮಪ್ಪ. ನಮ್ಮ ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಾತನನ್ನು ತಿರುಮೇನಹಳ್ಳಿ ಮುನಿಶಾಮಪ್ಪ ಎಂದೂ ಸಹ ಕರೆಯುತ್ತಿದ್ದರು. ನಮ್ಮ ತಾತನಿಗೆ ಇಬ್ಬರು ಮಕ್ಕಳು. ಅವರು ನಮ್ಮ ತಂದೆ ನಂಜಪ್ಪ ಮತ್ತು ಅಕ್ಕಯಮ್ಮ. ಅಕ್ಕಯಮ್ಮ ಅವರಿಗೆ ಒಟ್ಟು ಐದು ಜನ ಮಕ್ಕಳು. ಅವರು ನಮ್ಮ ತಾಯಿ ಮುನಿಯಮ್ಮ, ನಾರಾಯಣಮ್ಮ, ಕೆಂಪಮ್ಮ, ನಾರಾಯಣಸ್ವಾಮಿ ಮತ್ತು ಅಶ್ವತಪ್ಪ ಆಗಿರುತ್ತಾರೆ. ನಾರಾಯಣಮ್ಮ ಅವರನ್ನು ಶಿಡ್ಲಘಟ್ಟಕ್ಕೆ ಮದುವೆ ಮಾಡಿಕೊಟ್ಟಿದ್ದರು. ಕೆಂಪಮ್ಮ ಅವರನ್ನು ಮೈಲನಹಳ್ಳಿಯ ಸುಬ್ಬಣ್ಣ ಅವರಿಗೆ ಮದುವೆ ಮಾಡಿಕೊಟ್ಟಿದ್ದರು. ಸದರಿ ಸುಬ್ಬಣ್ಣ ಮುನಿಶಾಮಪ್ಪ ಅವರ ಎರಡನೇ ಮಗ ಎಂದರೆ ನನಗೆ ಗೊತ್ತಿಲ್ಲ. ಮುನಿಶಾಮಪ್ಪ ಅವರಿಗೆ ಇಬ್ಬರು ಪತ್ನಿಯರು ಎಂದರೆ ನನಗೆ ಗೊತ್ತಿಲ್ಲ. ಒಬ್ಬರೇ ಹೆಂಡತಿ ಎಂದು ನುಡಿಯುತ್ತೇನೆ. ಮೊದಲನೇ ಹೆಂಡತಿ ಹೆಸರು ಭತ್ಯಮ್ಮ ಮತ್ತು ಎರಡನೇ ಹೆಂಡತಿಯ ಹೆಸರು ಹುಚ್ಚಮ್ಮ ಎಂದರೆ ನನಗೆ ಗೊತ್ತಿಲ್ಲ. ಭತ್ಯಮ್ಮನ ಮಕ್ಕಳು ನಂಜಪ್ಪ ಮತ್ತು ಅಕ್ಕಯಮ್ಮ ಎಂದರೆ ಸರಿ. ಹುಚ್ಚಮ್ಮನ ಮಗ ಸುಬ್ಬಣ್ಣ ಎಂದರೆ ಸರಿ. ಸುಬ್ಬಣ್ಣ ಮತ್ತು ಮಕ್ಕಳು ಮತ್ತು ನಂಜಪ್ಪ ಅವರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನನಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು ಪಡಿತರ ಚೀಟಿ ಎಂದು ಒಪ್ಪಿಕೊಳ್ಳುತ್ತೇನೆ. ಸದರಿ ಪಡಿತರ ಚೀಟಿಯಲ್ಲಿ ನಮ್ಮ ತಂದೆ ನಂಜಪ್ಪ ಅವರ ಹೆಸರು ಇದೆ ಎಂದರೆ ಸರಿ. ಸದರಿ ಪಡಿತರ ಚೀಟಿಯಲ್ಲಿ ನಂಜಪ್ಪ, ಸುಬ್ಬಣ್ಣ, ಕೆಂಪಮ್ಮ, ರಾಮಪ್ಪ, ರೇವಣ್ಣ, ನಾರಾಯಣಸ್ವಾಮಿ, ಭಾಗ್ಯಮ್ಮ, ಅಶ್ವತಪ್ಪ, ಕೆಂಪಣ್ಣ ಮತ್ತು ವೆಂಕಟಮ್ಮ ಅವರ ಹೆಸರು ಇದೆ. ಸದರಿ ದಾಖಲೆ ಸೃಷ್ಟಿಸಿದ ದಾಖಲೆ ಎಂದು

ನುಡಿಯುತ್ತೇನೆ. ಸದರಿ ದಾಖಲೆ ಒಟ್ಟು ಕುಟುಂಬದ ಪಡಿತರ ಚೀಟಿ ಎಂದರೆ ನಮ್ಮ ತಾಯಿ ಹಾಗೂ ನಮ್ಮ ಸಹೋರಿಯರ ಹೆಸರು ಇಲ್ಲ ಎಂದು ನುಡಿಯುತ್ತೇನೆ. ನನ್ನ ಸಹೋದರಿಯರಾದ ಲಕ್ಷ್ಮಮ್ಮ, ಸುಬ್ಬಮ್ಮ, ಕೃಷ್ಣಮ್ಮ ಮತ್ತು ರಾಮಕ್ಕ ಅವರ ಹೆಸರು ಇಲ್ಲ ಎಂದು ನುಡಿಯುತ್ತೇನೆ. ನಮ್ಮ ತಾಯಿ 1982 ರಲ್ಲಿ ಮರಣ ಹೊಂದಿರುತ್ತಾರೆ. ವೆಂಕಟಮ್ಮ, ಲಕ್ಷ್ಮಮ್ಮ, ನಾನು ಮತ್ತು ಕೃಷ್ಣಮ್ಮ ಅವರ ಮದುವೆ ನಮ್ಮ ತಾಯಿ ಜೀವಂತ ಇದ್ದಾಗ ಆಗಿತ್ತು. ರಾಮಕ್ಕ ಅವರಿಗೆ ನಂತರ ಮದುವೆಯಾಗಿರುತ್ತದೆ. ರಾಮಕ್ಕ ಅವರಿಗೆ ಯಾವಾಗ ಮದುವೆಯಾಯಿತು ಎಂದು ನನಗೆ ಗೊತ್ತಿಲ್ಲ. ನಮ್ಮ ತಾಯಿ ಮರಣ ಹೊಂದಿ ಮೂರು ವರ್ಷಕ್ಕೆ ಅವರ ಮದುವೆಯಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣ ಹೊಂದಿದ ನಂತರ ಹಾಗೂ ನಮಗೆ ಮದುವೆಯಾದ ನಂತರ ಸದರಿ ಪಡಿತರ ಚೀಟಿಯನ್ನು ಮಾಡಿಸಲಾಗಿದ್ದು, ಆ ಕಾರಣದಿಂದ ನಮ್ಮ ಹೆಸರು ಸದರಿ ದಾಖಲೆಯಲ್ಲಿ ಇಲ್ಲ ಎಂದರೆ ಲಕ್ಷ್ಮಮ್ಮ ಸಹ ಜೊತೆಯಲ್ಲಿದ್ದರು, ಅವರು ಹೆಸರು ಬರಬೇಕಿತ್ತು ಎಂದು ನುಡಿಯುತ್ತೇನೆ. ಸದರಿ ಪಡಿತರ ಚೀಟಿ ಸರ್ಕಾರದಿಂದ ಜಾರಿ ಮಾಡಲಾದ ದಾಖಲೆಯಾಗಿದ್ದು ಸೃಷ್ಟಿ ಮಾಡಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**